ಉ) ಆರೋಗ್ಯ ಕವಚ ಯೋಜನೆಯಡಿ ತುರ್ತು ಆಂಬುಲೆನ್ಸ್ ಸೌಲಭ್ಯವನ್ನು ರಾಜ್ಯ ಸರ್ಕಾರವು ಜಾರಿಗೊಳಿಸಿದ್ದು, ಬಾಗೇಪಲ್ಲಿಯಲ್ಲಿ ಸಹ ಸದರಿ ಸೌಲಭ್ಯವಿದೆ.

ಭಾರತ ಸರ್ಕಾರದ ಸಹಯೋಗದೊಂದಿಗೆ ರಾಷ್ಟ್ರೀಯ ಹೆದ್ದಾರಿ 7 ರಲ್ಲಿ ಬಾಗೇಪಲ್ಲಿಯಲ್ಲಿ ಟ್ರಾಮಕೇರ್ ಸೆಂಟರ್ ಸ್ಥಾಪಿಸಲು ಭಾರತ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದ್ದು, ಅದನ್ನು 2010–11 ರಲ್ಲಿ ಸ್ಥಾಪಿಸಲು ಉದ್ದೇಶವಿದೆ.

**ಚಿಕ್ಕಬಳ್ಳಾಪುರ ಜಿಲ್ಲೆಯ ಅಲ್ಪಸಂಖ್ಯಾತರ ಕಲ್ಯಾಣಕ್ಕೆ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು**

**454 (962) ಶ್ರೀ ಸಂಪಂಗಿ ಎನ್. (ಬಾಗೇಪಲ್ಲಿ) :** ಮಾನ್ಯ ಹಜ್, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಕಳೆದ ಎರಡು ವರ್ಷಗಳಲ್ಲಿ ಅಲ್ಪಸಂಖ್ಯಾತರಿಗಾಗಿ ಯಾವ ಯಾವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳ ಲಾಗಿದೆ; ಅದಕ್ಕೆ ವಿನಿಯೋಗಿಸಿದ ಹಣವೆಷ್ಟು; ಯಾವ ರೀತಿ ಅಲ್ಪ ಸಂಖ್ಯಾತರು ಅದರ ಪ್ರಯೋಜನ ಪಡೆಯುತ್ತಿದ್ದಾರೆ.

ಆ) ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಈ ಇಲಾಖೆಯಿಂದ ಇದುವರೆವಿಗೂ ನಿರ್ಮಾಣಗೊಂಡಿರುವ ಸಮುದಾಯ ಭವನಗಳ ಸಂಖ್ಯೆ ಎಷ್ಟು; ಅಲ್ಪ ಸಂಖ್ಯಾತರಿಗಾಗಿ ಶಾದಿಮಹಲ್‌ಗಳನ್ನು ನಿರ್ಮಿಸಲಾಗಿದೆಯೇ; ನಿರ್ಮಿಸಿದ್ದಲ್ಲಿ, ಅದರ ಖರ್ಚು ಎಷ್ಟು; ನಿರ್ಮಿಸಬೇಕಾದರೆ ಎಷ್ಟು ಹಣ ಮೀಸಲಿಡಲಾಗಿದೆ?

**ಪ್ರೊ.ಡಾ. ಮುಮ್ತಾಜ್ ಅಲಿ ಖಾನ್, (ಹಜ್, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು) :**

ಅ) ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಕಳೆದ 2 ವರ್ಷಗಳಲ್ಲಿ ಅಲ್ಪಸಂಖ್ಯಾತರಿಗಾಗಿ ಅಲ್ಪಸಂಖ್ಯಾತರ ನಿರ್ದೇಶನಾಲಯದಿಂದ ಹಮ್ಮಿಕೊಂಡ ಕಾರ್ಯಕ್ರಮಗಳ ವಿವರ ಹಾಗೂ ವಿನಿಯೋಗಿಸಿದ ಹಣವದ ವಿವರವನ್ನು ಅನುಬಂಧ–1 ರಲ್ಲಿ ಲಗತ್ತಿಸಿದೆ.

2007–08 ರಲ್ಲಿ 23.59 ಲಕ್ಷ, 2008–09ನೇ ಸಾಲಿನಲ್ಲಿ ರೂ.47.03 ಲಕ್ಷ ಹಾಗೂ 2009–10ನೇ ಸಾಲಿನಲ್ಲಿ 97.46 ಲಕ್ಷಗಳನ್ನು ವಿನಿಯೋಗಿಸಲಾಗಿದೆ.

ಅಲ್ಪಸಂಖ್ಯಾತರ ವಿದ್ಯಾರ್ಥಿಗಳಿಗಾಗಿ ವಿದ್ಯಾರ್ಥಿ ನಿಲಯಗಳಲ್ಲಿ ವಸತಿ ಸೌಲಭ್ಯವನ್ನು ಕಲ್ಪಿಸಲಾಗಿದೆ. ಹಾಗೂ ಅಲ್ಪಸಂಖ್ಯಾತರ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಮೋರಾರ್ಜಿ ದೇಸಾಯಿ ಶಾಲೆಯಲ್ಲಿ ಪ್ರವೇಶಾವಕಾಶ ಕಲ್ಪಿಸಲಾಗಿದೆ. ಐ.ಟಿ.ಐ. ಡಿಪ್ಲೊಮೋ ಕಾನೂನು ಪದವೀದರರಿಗೆ ಶಿಷ್ಯವೇತನ ಮಂಜೂರು ಮಾಡಲಾಗಿದೆ ನಿರುದ್ಯೋಗಿ ಅಲ್ಪಸಂಖ್ಯಾತರಿಗಾಗಿ ವೃತ್ತಿ ತರಬೇತಿ ಹಾಗೂ ಗಣಕಯಂತ್ರ ತರಬೇತಿಯನ್ನು ನೀಡಲಾಗಿದೆ. ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಉತ್ತೇಜನ ನೀಡುವುದರ ಮೂಲಕ ಪ್ರೋತ್ಸಾಹಿಸಲಾಗಿದೆ. ಅಲ್ಪಸಂಖ್ಯಾತರ ಶಾಲೆಗಳಿಗೆ ಬೋಧನಾ ಮತ್ತು ಕಲಿಕಾ ಸಾಮಗ್ರಿಗಳನ್ನು ಪೂರೈಸಲಾಗಿದೆ.

ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದಿಂದ ಕಳೆದ ಎರಡು ವರ್ಷಗಳಿಂದ ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಅಲ್ಪಸಂಖ್ಯಾತರ ಕಲ್ಯಾಣಕ್ಕಾಗಿ ಈ ಕೆಳಕಂಡ ಯೋಜನೆಗಳನ್ನು ಹಮ್ಮಿಕೊಂಡು ಕಾರ್ಯಗತಗೊಳಿಸಲಾಗುತ್ತಿದೆ.

1. "ಸ್ವಾವಲಂಬನ" ಸಾಲ ಮತ್ತು ಸಹಾಯಧನ ಯೋಜನೆ.
2. "ಅರಿವು" (ವಿದ್ಯಾಭ್ಯಾಸ) ಸಾಲ ಯೋಜನೆ
3. "ಶ್ರಮಶಕ್ತಿ" ಯೋಜನೆ
4. "ಗಂಗಾ ಕಲ್ಯಾಣ" ಯೋಜನೆ
5. "ಮೈಕ್ರೋ" ಸಾಲ ಮತ್ತು ಸಹಾಯಧನ ಯೋಜನೆ
6. "ಭೂ ಖರೀದಿ" ಯೋಜನೆ

2007–08ನೇ ಸಾಲಿನಲ್ಲಿ ರೂ.16.63 ಲಕ್ಷಗಳನ್ನು ಹಾಗೂ 2008–09ನೇ ಸಾಲಿನಲ್ಲಿ ರೂ.77.94 ಲಕ್ಷಗಳನ್ನು ವಿನಿಯೋಗಿಸಲಾಗಿದೆ. ಮತೀಯ ಅಲ್ಪಸಂಖ್ಯಾತರು ಸಾಲದ ರೂಪದಲ್ಲಿ ಹಣಕಾಸಿನ ನೆರವನ್ನು ಹಾಗೂ ಗಂಗಾ ಕಲ್ಯಾಣ ಯೋಜನೆಯಡಿಯಲ್ಲಿ ನೀರಾವರಿ ಸೌಲಭ್ಯವನ್ನು ಪಡೆದಿರುತ್ತಾರೆ.

ಆ) ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಇದುವರಗೆ 8 ಶಾದಿಮಹಲ್/ ಸಮುದಾಯಭವನಗಳನ್ನು ನಿರ್ಮಿಸಲಾಗಿದೆ. ಈ ಉದ್ದೇಶಕ್ಕಾಗಿ ರೂ.102.00 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ.

ಅಲ್ಪಸಂಖ್ಯಾತರ ಸಂಸ್ಥೆಗಳಿಂದ ಪ್ರಸ್ತಾವನೆಗಳು ಬಂದ ನಂತರ ಪರಿಶೀಲಿಸಿ ಅನುದಾನ ಬಿಡುಗಡೆ ಮಾಡಲು ಅಗತ್ಯ ಕ್ರಮ ಕೈಗೊಳ್ಳಲಾಗುತ್ತಿದೆ.

ಜಿಲ್ಲಾ ಮಟ್ಟದಲ್ಲಿ ನಿರ್ಮಿಸುವ ಶಾದಿಮಹಲ್/ಸಮುದಾಯ ಭವನಗಳಿಗೆ ಗರಿಷ್ಠ 50.00 ಲಕ್ಷಗಳನ್ನು ಹಾಗೂ ತಾಲ್ಲೂಕು ಕೇಂದ್ರ ಮತ್ತು ಇತರೇ ಸ್ಥಳಗಳಲ್ಲಿ ನಿರ್ಮಿಸುವ ಶಾದಿಮಹಲ್/ಸಮುದಾಯ ಭವನಗಳಿಗೆ ಗರಿಷ್ಠ ರೂ. 20.00 ಲಕ್ಷಗಳನ್ನು ಬಿಡುಗಡೆ ಮಾಡಲಾಗುವುದು.

**ಅನುಬಂಧ – 1**

**ಶ್ರೀ ಎನ್. ಸಂಪಂಗಿ, (ಬಾಗೇಪಲ್ಲಿ) ಮಾನ್ಯ ವಿಧಾನ ಸಭಾ ಸದಸ್ಯರು, ರವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 962 ಕ್ಕೆ ಅನುಬಂಧ ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಕಳೆದ ಎರಡು ವರ್ಷಗಳಲ್ಲಿ ಅಲ್ಪಸಂಖ್ಯಾತರಿಗಾಗಿ ಹಮ್ಮಿಕೊಂಡ ಕಾರ್ಯಕ್ರಮಗಳ ಹಾಗೂ ಅನುದಾನದ ವಿವರ**

(ರೂ. ಲಕ್ಷಗಳಲ್ಲಿ)

| ಕ್ರ. ಸಂ. | ಕಾರ್ಯಕ್ರಮ | 2007–08ನೇ ಸಾಲಿನಲ್ಲಿ ಖರ್ಚಾದ ಮೊತ್ತ | 2008–09ನೇ ಸಾಲಿನಲ್ಲಿ ಖರ್ಚಾದ ಮೊತ್ತ | 2009–10ನೇ ಸಾಲಿನಲ್ಲಿ ಖರ್ಚಾದ ಮೊತ್ತ |
|---|---|---|---|---|
| 1 | ಅಲ್ಪಸಂಖ್ಯಾತರಿಗಾಗಿ ಐ.ಟಿ.ಐ. ಡಿಪ್ಲೋಮೋ ವಿದ್ಯಾರ್ಥಿಗಳಿಗೆ ಶಿಷ್ಯವೇತನ | 0.35 | 0.76 | 0.76 |
| 2 | ಅಲ್ಪಸಂಖ್ಯಾತರ ಪಾಸಗಿ ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯಗಳಿಗೆ ಸಹಾಯಧನ | 1.75 | 3.49 | 4.47 |
| 3 | ಅಲ್ಪಸಂಖ್ಯಾತರಿಗಾಗಿ ವೃತ್ತಿ ತರಬೇತಿ | – | 0.46 | 0.48 |
| 4 | ಕಾನೂನು ಪವೀಧರರಿಗೆ ಶಿಷ್ಯವೇತನ | – | 0.12 | 0.60 |
| 5 | ಅಲ್ಪಸಂಖ್ಯಾತರ ಹೊಸ ವಿದ್ಯಾರ್ಥಿನಿಲಯ | 5.00 | 4.50 | 13.00 |
| 6 | ಅಲ್ಪಸಂಖ್ಯಾತರ ಶಾಲೆಗೆ ಕಲಿಕಾ ಸಾಮಗ್ರಿ ಪೂರೈಕೆ | 4.00 | 6.00 | 1.10 |
| 7 | ಅಲ್ಪಸಂಖ್ಯಾತರಿಗೆ ನರ್ಸಿಂಗ್ ತರಬೇತಿ | – | 0.70 | 0.30 |
| 8 | ಅಲ್ಪಸಂಖ್ಯಾತರಿಗೆ ಶಾದಿಮಹಲ್ ನಿರ್ಮಾಣ | 10.00 | 17.50 | 39.00 |
| 9 | ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ | – | 9.00 | 30.15 |
| 10 | ಅಲ್ಪಸಂಖ್ಯಾತರಿಗೆ ವಿದ್ಯಾರ್ಥಿಗಳ ಉತ್ತೇಜನ | 2.59 | 4.50 | 7.60 |
| | ಒಟ್ಟು | 23.69 | 47.03 | 97.46 |